ನಾನು ಏಕೆ ಕತೆ ಬರೆಯಬೇಕು? ಏಕೆ ನನಗೆ ಕವಿಯಾಗಬೇಕೆಂಬ ಆಸೆ? ಇದಕ್ಕೂ ಉತ್ತರವಿದೆ: ನನಗೆ ಕತೆ ಓದುವುದು ಇಷ್ಟ. ಚಿಕ್ಕವಳಿರುವಾಗ ಅಪ್ಪ, ಅಮ್ಮ ಮತ್ತು ತಂಗಿಯ ಜೊತೆಗೆ ನಾನು ತಿಂಗಳಿಗೆ ಒಮ್ಮೆಯಾದರೂ ಜಯನಗರದ ಶಾಪಿಂಗ್ ಕಾಂಪ್ಲೆಕ್ಸ್‌ಗೆ ಹೋಗುತ್ತಿದ್ದೆ. ಅಲ್ಲಿ ಚಂದಮಾಮ, ಬಾಲಮಂಗಳ, ಮಯೂರ ಪತ್ರಿಕೆಗಳನ್ನು ತೋರಣದಂತೆ ಸಿಂಗರಿಸಿದ ಪುಟ್ಟ ಅಂಗಡಿಯ ಮುಂದೆ ಅಪ್ಪ ನಿಂತರೆ ನಾನೂ ನಿಲ್ಲುತ್ತಿದ್ದೆ. ಮುಂದಿನ ತಿಂಗಳ ಚಂದಮಾಮ, ಬಾಲಮಂಗಳವನ್ನು ಹಿಂದಿನ ತಿಂಗಳ ಕೊನೆಯಲ್ಲೇ ಖರೀದಿ ಮಾಡಿ ಓದುವ ಮಜವೇ ಬೇರೆ. ನನಗೆ ಒಂದೇ ಪುಟಕ್ಕೆ ಮುಗಿದು ಹೋಗುವ ಸುಪಂಡಿ ಹಾಸ್ಯ ಕತೆಯೂ ಇಷ್ಟ. 'ಮುಂದುವರೆಯುತ್ತದೆ...' ಎಂಬ ಧಾರಾವಾಹಿ ಕತೆಗಳೂ ಕುತೂಹಲ ಕೆರಳಿಸುವುದರೊಂದಿಗೆ ಇನ್ನೊಂದು ತಿಂಗಳು ಕಾಯಬೇಕಲ್ಲ ಎಂಬ ಬೇಜಾರು. ಆಗ ಆ 'ಮುಂದುವರೆಯುವ' ಕತೆಗಳಿಗೆ ನಾನೇ ಮನಸಲ್ಲಿ ವಿಧ ವಿಧವಾದ ಮುಂದಿನ ಭಾಗಗಳನ್ನು ಹೆಣೆಯುತ್ತಿದ್ದೆ. ಪ್ರಾಸ ಸೇರಿಸಿ ನಾನು ಬರೆದ ನಾಲ್ಕು ಸಾಲಿನ ಪದ್ಯ ಮಕ್ಕಳಿಗಾಗೇ ಪ್ರಕಟವಾಗುತ್ತಿದ್ದ ಒಂದು ಪತ್ರಿಕೆಯಲ್ಲಿ ಪ್ರಕಟವಾದಾಗ, ''ನನ್ನ ಮಗಳೊಬ್ಬ ಮರಿಕವಿ'' ಎಂದು ಕವಿಯಾದ ಅಪ್ಪ ಖುಷಿ ಪಟ್ಟಿದ್ದರು.

ನನ್ನಲ್ಲಿ ಇದ್ದ ಆ ಬರವಣಿಗೆಯ ಸೆಳೆತ ಈಗ ಮತ್ತೆ ಎಚ್ಚೆತ್ತಿದೆ. ಈಗ ಬೆಂಗಳೂರಿನಲ್ಲೇ ನೆಲಸಿರುವ ನನಗೆ ನನ್ನ ವಯಸ್ಸಿನ ಎಷ್ಟೋ ಜನ ಬರವಣಿಗೆಯಲ್ಲಿ ತೊಡಗಿರುವುದು, ಅದರಲ್ಲೂ ಕನ್ನಡದಲ್ಲಿ ಬರೆಯುವುದನ್ನು ಗಂಭೀರವಾಗಿ ತೆಗೆದುಕೊಂಡಿರುವುದು ಸಂತಸದ ಸಂಗತಿ. ಸಾಕಷ್ಟು ಅಪ್ಲಿಕೇಶನ್‌ಗಳು, ಯುವಜನತೆಯೇ ರಚಿಸುತ್ತಿರುವ ಕನ್ನಡ ಕೂಟಗಳೇ ಇದಕ್ಕೆ ಉದಾಹರಣೆ. ಒಂದು ಚಿಕ್ಕ ಹಾಸ್ಯ ವಿಡಿಯೊ ಮಾಡಲೂ ಸಹ ಬಹಳಷ್ಟು ಬರೆಯಬೇಕು. ಹಾಸ್ಯ ಸೃಷ್ಟಿಸುವುದೂ ಬಹಳ ಕಷ್ಟದ ಕೆಲಸವೇ ಸರಿ! ಅಮೆಜಾನ್, ನೆಟ್‌ಫ್ಲಿಕ್ಸ್‌ನ ಈ ದಿನಗಳಲ್ಲಿ ಒಬ್ಬ ಒಳ್ಳೆಯ ಬರಹಗಾರ, ಕವಿಗೆ ಬೇಡಿಕೆ ಮತ್ತು ಮನ್ನಣೆ ಜಾಸ್ತಿಯಾಗಿದೆ. ಇದಕ್ಕಾಗಿ ಸಾಕಷ್ಟು ಓದಬೇಕು. ಮತ್ತೆ ಮತ್ತೆ ಬರೆಯಬೇಕು. ಬರೆದಿದ್ದನ್ನು ನಾವೇ ಓದಿ ತಿದ್ದಿ ತೀಡಬೇಕು. ಸರಾಗವಾಗಿ ಕತೆ ಬರೆಯುವ ನನ್ನ ತಂದೆ ಮೊದಲು ಕತೆ ಬರೆಯುವುದು ಅಭ್ಯಾಸವಾಗಲು ದಿನಚರಿ ಬರೆಯುತ್ತಿದ್ದೆ ಎಂದು ಹೇಳಿದ್ದು ನೆನಪಿದೆ.

ಇಂದಿನ ಯುವಜನತೆಗೆ ಆತ್ಮವಿಶ್ವಾಸದೊಂದಿಗೆ ಗೊಂದಲಗಳೂ ಅಷ್ಟೇ ಇವೆ. ಗೊಂದಲಮಯ ಅಲೆಗಳಲ್ಲಿ ತಮ್ಮ ನಿಜವಾದ ಕನಸನ್ನು ಆರಿಸಿಕೊಳ್ಳಲಾಗದೆ ಬಹುಪಾಲು ಯುವ ಜನತೆ ತಬ್ಬಿಬ್ಬಾಗಿದೆ. ಭಾರೀ ಸಂಬಳ ತರುವ ಕೆಲಸದ ಬೆನ್ನೇರಿ ಹೋಗುವ ಕನಸನ್ನು ಬಿತ್ತನೆ ಮಾಡಲಾಗುತ್ತಿದೆ. ಇಂಥ ಸಮಯದಲ್ಲಿ ಒಬ್ಬ ಒಳ್ಳೆಯ ಮಾರ್ಗದರ್ಶಿಯ ಅಗತ್ಯವಿದೆ.

ನನ್ನನ್ನೂ ಸೇರಿಸಿಯೇ ಹೇಳುತ್ತೇನೆ, ನಮ್ಮ ತಲೆಮಾರಿಗೆ ತಾಳ್ಮೆ ಕಮ್ಮಿ. ನನ್ನ ತಂದೆ ಒಂದು ಪದ್ಯ, ಕಥೆ ಬರೆದು ಪತ್ರಿಕೆಗಳಿಗೆ ಪೋಸ್ಟ್ ಮಾಡಿ ಬರುತ್ತಿದ್ದರಂತೆ. ಇದಾದ ಮೇಲೆ ಪದ್ಯ ಮುದ್ರಿಸಲಾಗುವುದೋ ಇಲ್ಲವೋ ಎಂಬ ಕಾಯುವುದು. 'ಪ್ರಕಟಿಸಲಾಗುವುದಿಲ್ಲ' ಎಂದು ಎಷ್ಟೋ ಬಾರಿ ಪೋಸ್ಟು ವಾಪಸ್ ಬರುತ್ತಿತ್ತಂತೆ. ಆದರೂ ಬೆಂಬಿಡದ ತ್ರಿವಿಕ್ರಮನಂತೆ ಸಾಧಿಸುವ ಛಲದೊಂದಿಗೆ ಅಪ್ಪ ಈಗ ಎತ್ತರಕ್ಕೆ ಬೆಳೆದಿದ್ದಾನೆ. ಈಗ ನನ್ನನ್ನೇ ಆ ಸ್ಥಾನದಲ್ಲಿ ಕಲ್ಪಿಸಿಕೊಂಡರೆ ನನ್ನಲ್ಲಿ ತಾಳ್ಮೆ ಎಳ್ಳಷ್ಟೂ ಕಾಣ ಸಿಗುವುದಿಲ್ಲ! ಈಗ ಬರೆದಿದ್ದು ನಾಳೆ ಮುದ್ರಣಗೊಳ್ಳಬೇಕು ಎಂಬ ಇನ್‌ಸ್ಟಂಟ್ ಮನಃಸ್ಥಿತಿ ನನ್ನದು. ನಮ್ಮ ಬರಹ ಪತ್ರಿಕೆಗಳಲ್ಲಿ ಮುದ್ರಣಗೊಳ್ಳದಿದ್ದರೆ ಫೇಸ್‌ಬುಕ್‌ನ ಗೋಡೆಯ ಮೇಲೆ ಅದನ್ನು ಹಾಕಿ ಒಂದಷ್ಟು ಲೈಕ್ಸ್, ಕಾಮೆಂಟ್‌ಗಳು ಬಂದರೆ ಅಲ್ಲಿಗೆ ನಮ್ಮ ಬರಹದ ಆಯಸ್ಸು ಮುಗಿದಂತೆ. ಹೀಗೆ ನಮಗೆ ಬೀಜವನ್ನು ಊರಿದ ತಕ್ಷಣ ಫಲವನ್ನು ಕೊಯ್ದುಕೊಳ್ಳಬೇಕಾಗಿದೆ. ಕೆಲವು ಕ್ಷೇತ್ರಗಳಲ್ಲಿ ಈ ದಿಢೀರ್ ಮನಃಸ್ಥಿತಿ ವರವಾಗಿರಬಹುದು. ಆದರೆ, ಈಗ ನಾನು ಕನಸು ಕಾಣುತ್ತಿರುವ ಕ್ಷೇತ್ರದಲ್ಲಂತೂ ಖಂಡಿತ ಅಲ್ಲ!